# ಕುವೆಂಪು ವಿಶ್ವವಿದ್ಯಾಲಯ

ವಿಶ್ವವಿದ್ಯಾನಿಲಯ ಕಾರ್ಯಾಲಯ, ಹಣಕಾಸು ವಿಭಾಗ, ಜ್ಞಾನ ಸಹ್ಯಾದ್ರಿ, ಶಂಕರಘಟ್ಟ.

ಸಂಖ್ಯೆ: ಕುವಿ:ಆರ್ಥಿಕ-15: 1192 :2021-22 ದಿನಾಂಕ: 22-10-2021

## ಸುತ್ತೋಲೆ

ವಿಷಯ: 2021-22ನೇ ಆರ್ಥಿಕ ಸಾಲಿನ ಆದಾಯ ತೆರಿಗೆಗೆ ಸಂಬಂಧಿಸಿದ **ಲೆಕ್ಕಾಚಾರ ತಃಖ್ತೆಯನ್ನು** ಸಲ್ಲಿಸುವ ಕುರಿತು.

ಉಲ್ಲೇಖ: ನಿರ್ದೇಶಕರು, ಆದಾಯ ತೆರಿಗೆ ನಿರ್ದೇಶನಾಲಯ, ನವದೆಹಲಿ, ಇವರ ಪತ್ರ ಸಂಖ್ಯೆ: ಆ.ತೆ./008 ಬಿ.ಎಲ್.ಆರ್: 2/0927, ದಿನಾಂಕ: 12-02-2007.

---***---

ಕುವೆಂಪು ವಿಶ್ವವಿದ್ಯಾನಿಲಯ, ಅದರ ಘಟಕ ಕಾಲೇಜುಗಳಲ್ಲಿ ಮತ್ತು ನೇರ ಆಡಳಿತಕ್ಕೆ ಒಳಪಟ್ಟ ಕಾಲೇಜಿನಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಅಧ್ಯಾಪಕ/ ಅಧ್ಯಾಪಕೇತರ ಸಿಬ್ಬಂದಿ ವರ್ಗದವರು, 2021-22ನೇ ಆರ್ಥಿಕ ಸಾಲಿಗೆ **ಮುಂಗಡ ಆದಾಯ ತೆರಿಗೆ ಲೆಕ್ಕಾಚಾರದ** ತಃಖ್ತೆಯನ್ನು, ನಿಗದಿತ ನಮೂನೆಯಲ್ಲಿ, ವೇತನದಲ್ಲಿ ಉಳಿತಾಯ ಮಾಡುತ್ತಿರುವ ಮಾಹಿತಿಯನ್ನು ಹೊರತುಪಡಿಸಿ ಸ್ವಂತಕ್ಕೆ ತೊಡಗಿಸಿರುವ ಉಳಿತಾಯದ ಸಂಪೂರ್ಣ ವಿವರಗಳೊಂದಿಗೆ ದಿನಾಂಕ: 30ನೇ ಅಕ್ಟೋಬರ್ **2021** ರೊಳಗಾಗಿ ಹಣಕಾಸು ವಿಭಾಗಕ್ಕೆ ಪರಿಶೀಲನೆಗಾಗಿ ಹಾಗೂ ಫೆಬ್ರವರಿ-2022 ಮಾಹೆಯ ವೇತನದಲ್ಲಿ ಅಂತಿಮ ಆದಾಯ ತೆರಿಗೆಯನ್ನು ಕಟಾವಣೆಗೊಳಿಸಿ ವೇತನ ಪಾವತಿಸಲು ಅನುಕೂಲವಾಗುವಂತೆ ತುರ್ತಾಗಿ ಸಲ್ಲಿಸುವಂತೆ ಕೋರಲಾಗಿದೆ. ನಿಗದಿತ ನಮೂನೆಯನ್ನು ತಮ್ಮ ಕಛೇರಿ / ವಿಭಾಗಗಳಲ್ಲಿಯೇ www.kuvempu.ac.in ವೆಬ್‌ಸೈಟ್ ಮೂಲಕ ಎಕ್ಸೆಲ್-ರೆಡಿ-ಶೀಟ್ ಅನ್ನು ಡೌನ್‌ಲೋಡ್ ಮಾಡಿಕೊಂಡು ಮಾಹಿತಿ ಸಲ್ಲಿಸುವುದು.

1. ಉಳಿತಾಯದ ಬಗ್ಗೆ 80ಸಿ ಅಡಿಯಲ್ಲಿ ತೊಡಗಿಸುವ ಮೊತ್ತಕ್ಕೆ ಸಂಬಂಧಿಸಿರುವ ದಾಖಲೆಯ ಜೆರಾಕ್ಸ್ ಪ್ರತಿಗಳನ್ನು ಕಡ್ಡಾಯವಾಗಿ ಲಗತ್ತಿಸತಕ್ಕದ್ದು.

2. ಆದಾಯ ತೆರಿಗೆ ಲೆಕ್ಕಾಚಾರದ' ತಃಖ್ತೆಯನ್ನು ಸಲ್ಲಿಸುವಾಗ ಎಲ್ಲಾ ಉಳಿತಾಯಕ್ಕೆ ಸಂಬಂಧಿಸಿದ ಜೆರಾಕ್ಸ್ ಪ್ರತಿಗಳನ್ನು ಕಡ್ಡಾಯವಾಗಿ ಲಗತ್ತಿಸತಕ್ಕದ್ದು.

2

3. ಮನೆ ಬಾಡಿಗೆ ರಿಯಾಯಿತಿ ಪಡೆಯಲು ಬಯಸುವ ಅಧಿಕಾರಿಗಳು ತಾವು ಪಾವತಿಸುತ್ತಿರುವ ಮನೆ ಬಾಡಿಗೆ ಮೊತ್ತಕ್ಕೆ ಮನೆ ಮಾಲೀಕರಿಂದ ಪಡೆದ ರಶೀದಿ/ಸ್ವೀಕೃತಿಯನ್ನು ಜನವರಿ-2021ಕ್ಕೆ ಮತ್ತು ಜುಲೈ-2021ಕ್ಕೆ ಎರಡೂ ಮಾಹೆಗಳಿಗೆ ಸಂಬಂಧಿಸಿದಂತೆ ಲಗತ್ತಿಸಬೇಕು. ರಶೀದಿ/ಸ್ವೀಕೃತಿಯಲ್ಲಿ ಮನೆ ಮಾಲೀಕರ ಪೂರ್ಣ ವಿಳಾಸ ಮತ್ತು ಮಾಲೀಕರ ಪಾನ್ ಸಂಖ್ಯೆ ಇರತಕ್ಕದ್ದು.

4. ವಿವಿಧ ಖಾಸಗಿ ಸಂಸ್ಥೆಗಳಿಗೆ ಡೊನೇಷನ್(ವಂತಿಕೆ)ಗಳನ್ನು ಪಾವತಿಸಿ ಈ ಬಗ್ಗೆ ಆದಾಯ ತೆರಿಗೆ ವಿನಾಯಿತಿಯನ್ನು ಅಪೇಕ್ಷಿಸುವ ಅಧಿಕಾರಿ / ಸಿಬ್ಬಂದಿಯವರು ಸಂಬಂಧಪಟ್ಟ ಸಂಸ್ಥೆಯಿಂದ ಪಡೆದ ರಶೀದಿಯಲ್ಲಿ ಆದಾಯ ತೆರಿಗೆ ವಿನಾಯಿತಿ/ ರಿಯಾಯಿತಿಗೆ ಒಳಪಡುವುದೆಂಬ ಬಗ್ಗೆ ದೃಢೀಕರಣ ನಮೂದಿಸಿದ್ದಲ್ಲಿ ಮಾತ್ರ ಆದಾಯ ತೆರಿಗೆ ವಿನಾಯಿತಿಗೆ ಪರಿಗಣಿಸಲಾಗುವುದು.

5. ಮನೆ ನಿರ್ಮಾಣ ಖರೀದಿಗಳ ಬಗ್ಗೆ ಅಸಲು ಮರುಪಾವತಿ ಕಂತುಗಳ ಮೊತ್ತ, ಬಡ್ಡಿ ಮರುಪಾವತಿ ಕಂತುಗಳ ಮೊತ್ತ ಹಾಗೂ ರಾಷ್ಟ್ರೀಕೃತ ಬ್ಯಾಂಕ್ ಖಾತೆಗೆ ವಂತಿಕೆ ಕಂತುಗಳ ಮೊತ್ತವನ್ನು ಪಾವತಿಸಿದ ಬಗ್ಗೆ ಆದಾಯ ತೆರಿಗೆ ವಿನಾಯಿತಿ ಪಡೆಯ ಬಯಸುವವರು ಈ ಸಂಬಂಧ ಸೆಕ್ಷನ್‌ಗಳಲ್ಲಿ ನಿಗಧಿಪಡಿಸಿರುವ ಗರಿಷ್ಠ ಮಿತಿಗಳನ್ನು ಗಮನಿಸುವುದು ಹಾಗೂ ಈ ಸಂಬಂಧ ದಾಖಲಾತಿಗಳ ಪ್ರತಿಗಳನ್ನು ಲಗತ್ತಿಸತಕ್ಕದ್ದು.

6. ಮನೆ ನಿರ್ಮಾಣ/ಖರೀದಿಗಳಿಗಾಗಿ ಸಾಲ ಮಂಜೂರಾತಿ ಪಡೆದು ಮನೆ ನಿರ್ಮಿಸಿ, ಸ್ವತಃ ವಾಸವಾಗಿರುವ ಬಗ್ಗೆ ಅಥವಾ ಬಾಡಿಗೆಗೆ ನೀಡಿರುವ ಬಗ್ಗೆ ದೃಢೀಕರಣ ಲಗತ್ತಿಸುವುದು. ಬಾಡಿಗೆಗೆ ನೀಡಿದಲ್ಲಿ ಬಾಡಿಗೆ ಮೊತ್ತವನ್ನು ನಮೂದಿಸಿ ದೃಢೀಕರಿಸಬೇಕು.

7. ನಿರ್ದೇಶಕರು, ಆದಾಯ ತೆರಿಗೆ ನಿರ್ದೇಶನಾಲಯ, ನವದೆಹಲಿ ಇವರು ಉಲ್ಲೇಖಿತ ಪತ್ರದನುಸಾರ ಆದಾಯ ತೆರಿಗೆ ವ್ಯಾಪ್ತಿಗೊಳಪಡುವ ಎಲ್ಲಾ ನೌಕರರು ವಿವರಗಳನ್ನು ಸಲ್ಲಿಸುವಾಗ ಆದಾಯ ತೆರಿಗೆ ಕಾಯಿದೆ ಸೆಕ್ಷನ್ 139(ಎ) (5ಬಿ)ಯ ಪ್ರಕಾರ PAN ನಂಬರ್ (PAN- Permanent Account Number) ನಮೂದಿಸುವುದು ಕಡ್ಡಾಯವಾಗಿರುತ್ತದೆ.

8. ಸಿಬ್ಬಂದಿಗಳು ಕಳೆದ ಸಾಲಿನಲ್ಲಿ (2020-21ನೇ ಆರ್ಥಿಕವರ್ಷ) ನೀಡಿರುವ ಲೆಕ್ಕಾಚಾರವನ್ನೇ ಅನುಸರಿಸಿ ಮಾರ್ಚಿ-2021 ರಿಂದ ಆದಾಯ ತೆರಿಗೆ ಕಟಾವಣೆ ಮಾಡಲಾಗುತ್ತಿದೆ. ಈ ಸುತ್ತೋಲೆಯಲ್ಲಿ ತಿಳಿಸಿರುವ ದಿನಾಂಕ:30-10-2021 ರೊಳಗೆ 2021-22ನೇ ಸಾಲಿನ ತೆರಿಗೆ ವಿನಾಯಿತಿಗೆ ಸಂಬಂಧಿಸಿರುವ ದಾಖಲಾತಿಗಳನ್ನು ಸಲ್ಲಿಸದೇ ಇದ್ದಲ್ಲಿ, ನವೆಂಬರ್-2021ರ ಮಾಹೆಯಿಂದ **ಹಳೆಯ ಲೆಕ್ಕಾಚಾರವನ್ನು ಪರಿಗಣನೆಗೆ ತೆಗೆದುಕೊಳ್ಳದೇ** ಆದಾಯ ತೆರಿಗೆ ಕಟಾವಣೆ ಮಾಡಲಾಗುವುದು.

ಹಣಕಾಸು ಅಧಿಕಾರಿ

**ಹಣಕಾಸು ಅಧಿಕಾರಿಗಳು**
**ಕುವೆಂಪು ವಿಶ್ವವಿದ್ಯಾಲಯ**
**ಜ್ಞಾನ ಸಹ್ಯಾದ್ರಿ, ಶಂಕರಘಟ್ಟ-577 451.**
**ಶಿವಮೊಗ್ಗ ಜಿಲ್ಲೆ.**

---3